## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 186 |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತ) |
| ಉತ್ತರಿಸಬೇಕಾದ ದಿನಾಂಕ | 03-03-2020 |
| ಉತ್ತರಿಸುವ ಸಚಿವರು | ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು |

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>(ಅ)</td><td>ಮಾರ್ಚ್, 2018ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಸಿಎಜಿ ವರದಿಯಲ್ಲಿ ಅಕ್ರಮ ಗಣಿಗಾರಿಕೆಯಿಂದ ನಕಲಿ ದಾಖಲೆ ಸೃಷ್ಟಿಸಿ ಗಣಿಗಾರಿಕೆ ಮಾಡುತ್ತಿರುವುದರಿಂದ ಹಾಗೂ ವ್ಯಾಪ್ತಿ ಮೀರಿದ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ರೂ.191.93 ಕೋಟಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಕಲ್ಲುಗಣಿ ಗುತ್ತಿಗೆದಾರರು ತಮಗೆ ಮಂಜೂರಾದ ಗುತ್ತಿಗೆ ಪ್ರದೇಶದಿಂದ ಹೊರಗಡೆ ಅಥವಾ ಗುತ್ತಿಗೆ ಅವಧಿ ಮುಗಿದ ಪ್ರಕರಣಗಳಲ್ಲಿ ತೆಗೆಯಲಾದ ಖನಿಜದ ಪ್ರಮಾಣವಾಗಿದ್ದು ಯಾವುದೇ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣಗಳಾಗಿರುವುದಿಲ್ಲ.</td></tr>
<tr><td>(ಆ)</td><td>ಈ ಅಕ್ರಮ ಗಣಿಗಾರಿಕೆ, ನಕಲಿ ದಾಖಲೆ ಸೃಷ್ಟಿಸಿ ಗಣಿಗಾರಿಕೆ ಹಾಗೂ ವ್ಯಾಪ್ತಿ ಮೀರಿದ ಗಣಿಗಾರಿಕೆ ಮಾಡುತ್ತಿರುವ ಬಗ್ಗೆ ಸಂಬಂಧಿತ ಅಧಿಕಾರಿಗಳಿಗೆ ತಿಳಿದಿರಲಿಲ್ಲವೇ; ಇಲ್ಲವೆಂದಾದಲ್ಲಿ ಅಂತಹ ಅಧಿಕಾರಿಗಳು ಕರ್ತವ್ಯ ಲೋಪವೆಸಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.</td><td>ಕಲ್ಲುಗಣಿ ಗುತ್ತಿಗೆದಾರರು ತಮಗೆ ಮಂಜೂರಾದ ಗುತ್ತಿಗೆ ಪ್ರದೇಶದಿಂದ ಹೊರಗಡೆ ಅಥವಾ ಗುತ್ತಿಗೆ ಅವಧಿ ಮುಗಿದ ಪ್ರಕರಣಗಳಲ್ಲಿ ತೆಗೆಯಲಾದ ಖನಿಜದ ಪ್ರಮಾಣವಾಗಿದ್ದು ಯಾವುದೇ ನಕಲಿ ದಾಖಲೆ ಸೃಷ್ಟಿಸಿರುವ ಪ್ರಕರಣಗಳಾಗಿರುವುದಿಲ್ಲ.<br><br>ಸಿ.ಎ.ಜಿ ವರದಿಯಲ್ಲಿ ಪ್ರಸ್ತಾಪಿಸಿರುವ ಗುತ್ತಿಗೆಗಳು ದಕ್ಷಿಣ ಕನ್ನಡ, ವಿಜಯಪುರ, ಬೆಳಗಾವಿ, ಬೆಂಗಳೂರು ಗ್ರಾಮಾಂತರ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಿಸಿದವಾಗಿರುತ್ತವೆ. ವಿವರ ಈ ಕೆಳಕಂಡಂತಿವೆ.<br><br><u>ಸಿಎಜಿ ವರದಿಯಲ್ಲಿ ಉಲ್ಲೇಖಿತವಾಗಿರುವ ಪ್ರಕರಣಗಳು</u><br><br>
<table>
<tr><th>ಕ್ರ ಸಂ</th><th>ಜಿಲ್ಲೆ</th><th>ಅವಧಿ ಮುಗಿದಗಣಿಗುತ್ತಿಗೆಗಳಿಂದತೆಗೆಯಲಾದಉಪಖನಿಜ</th><th>ಗುತ್ತಿಗೆ ಪ್ರದೇಶದಿಂದ ಹೊರಗಡೆ ತೆಗೆಯಲಾದ ಉಪ ಖನಿಜ</th></tr>
<tr><td>1</td><td>ದಕ್ಷಿಣಕನ್ನಡ</td><td>4</td><td>3</td></tr>
<tr><td>2</td><td>ವಿಜಯಪುರ</td><td>5</td><td>3</td></tr>
<tr><td>3</td><td>ಬೆಳಗಾವಿ</td><td>9</td><td>5</td></tr>
<tr><td>4</td><td>ಬೆಂಗಳೂರು ಗ್ರಾಮಾಂತರ</td><td>16</td><td>6</td></tr>
<tr><td>5</td><td>ಚಾಮರಾಜನಗರ</td><td>18</td><td>16</td></tr>
</table>
<br>ಸದರಿ ಸಿಎಜಿ ವರದಿಯಲ್ಲಿ ಪ್ರಸ್ತಾಪಿಸಿರುವ ಪ್ರಕರಣಗಳಿಗೆ ಸಂಬಂಧಿಸಿದ ಜಿಲ್ಲೆಯ ಅಧಿಕಾರಿಗಳು ದಂಡ ವಸೂಲಾತಿಗೆ ಕ್ರಮವಹಿಸಿ ಇದುವರೆಗೆ ರೂ. 5.51 ಕೋಟಿ ರಾಜಧನ ಮತ್ತು ದಂಡವನ್ನು ವಸೂಲಿ</td></tr>
</table>

| | | |
|---|---|---|
| | | ಮಾಡಿರುತ್ತಾರೆ. ಅಲ್ಲದೇ, ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲು ಮಾಡಲಾಗಿದೆ ಮತ್ತು ಪ್ರಸ್ತಾಪಿತ ಪ್ರಕರಣಗಳಲ್ಲಿ ಅನಧಿಕೃತ ಗಣಿಗಾರಿಕಗೆ ನಡೆಸುತ್ತಿದ್ದವರಿಗೆ ನಿಯಮಾನುಸಾರ ನೋಟೀಸ್ .ನ್ನ ಸಹ ಜಾರಿ ಮಾಡಿರುತ್ತಾರೆ.<br><br>ಸದರಿ ಪ್ರಕರಣಗಳಿಗೆ ಸಂಬಂಧಿಸಿದ ಜಿಲ್ಲೆಯ ಅಧಿಕಾರಿಗಳಿಂದ ಕೈಗೊಂಡ ಕ್ರಮಗಳ ವಿವರ ಈ ಕೆಳಕಂಡಂತಿರುತ್ತದೆ.<br><br>• ದಕ್ಷಿಣಕನ್ನಡಜಿಲ್ಲೆ, ವಿಜಯಪುರ, ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಚಾಮರಾಜನರ ಮತ್ತು ಹಾಸನ ಜಿಲ್ಲೆಗಳ ಒಟ್ಟು 85 ಪ್ರಕರಣಗಳಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಸುತ್ತಿದ್ದವರಿಗೆ ನೋಟೀಸ್‌ನ್ನು ಜಾರಿ ಮಾಡಲಾಗಿದೆ.<br>• ಸದರಿ 85 ಪ್ರಕರಣಗಳಲ್ಲಿ ಪ್ರಸ್ತುತದವರೆಗೆ ಒಟ್ಟು ರೂ.5.51 ಕೋಟಿ ಮೊತ್ತದ ರಾಜಧನ ಮತ್ತು ದಂಡವನ್ನು ವಸೂಲಿ ಮಾಡಲಾಗಿರುತ್ತದೆ.<br>• ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮೂರು ಪ್ರಕರಣಗಳಲ್ಲಿ ಸಂಬಂಧಿಸಿದ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿದೆ. |
| (ಇ) | ಅಕ್ರಮವೆಸಗಲು ಸಹಾಯ ಮಾಡಿದ ಎಷ್ಟು ಅಧಿಕಾರಿಗಳನ್ನುಅಮಾನತ್ತು ಮಾಡಲಾಗಿದೆ? | ಸಿಎಜಿ ವರದಿಯಲ್ಲಿ ಉಲ್ಲೇಖಿಸಿರುವ ವಿಷಯದ ಕುರಿತು ಸಂಬಂಧಿಸಿದ ಜಿಲ್ಲೆಗಳ ಅಧಿಕಾರಿಗಳು ಬಾಕಿ ವಸೂಲಾತಿಗೆ ಕ್ರಮವಹಿಸಿರುವುದರಿಂದ ಇದುವರೆವಿಗೂ ಯಾವುದೇ ಅಧಿಕಾರಿಗಳನ್ನು ಅಮಾನತು ಮಾಡಿರುವುದಿಲ್ಲ. |

ಸಿಐ 44 ಎಂಜಿಎಸ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು